**O.S. No.604/2018. DW1.**

**ದಿನಾಂಕಃ04.01.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ</u>** ವಾದಿಯವರ ಪರ ಶ್ರೀ ಡಿ ಸಿ ವಕೀಲರಿಂದಃ-

ನಿಡಿ 1A ಈ ದಾವೆಯ ದಾವಾ ಆಸ್ತಿಗೆ ಸಂಬಂಧಪಟ್ಟ ಕ್ರಯಪತ್ರ ಆಗಿರುವುದಿಲ್ಲ ಎಂದರೆ ಸರಿ. ನಿಡಿ 1A ಸಖರಾಯಪಟ್ಟಣ ಹೋಬಳಿಯ ಸರ್ವೆ ನಂ.268 ರ ಜಮೀನಿಗೆ ಸಂಬಂಧಪಟ್ಟಿದ್ದಾಗಿದೆ. ನಿಡಿ1A ನ್ನು ಸೈಯದ್ ಅನ್ವರ್ ಮತ್ತು ಅವರು ಕುಟುಂಬದವರು ಸೈಯದ್ ಮುರ್ತಜಃ (ನನ್ನ ತಂದೆ) ರವರಿಗೆ ಬರೆದುಕೊಟ್ಟಿರುತ್ತಾರೆ. ನಿಡಿ1A ನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯಲ್ಲಿ ಸೈಯದ್ ಅನ್ವರ್ ರವರ ಸಹಿ ಯಾವುದು ಕೇಳಿದ್ದು, ಸಾಕ್ಷಿಯು ಗುರುತಿದ ಸೈಯದ್ ಅನ್ವರ್ ರವರ ಸಹಿಯನ್ನು ನಿಡಿ1A(ಬಿ) ಎಂದು ಗುರುತಿಸಲಾಯಿತು.

ನಿಡಿ 2 ರಿಂದ 5 ರ ದಾಖಲೆಗಳ ಬಗ್ಗೆ ನಿಡಿ1A ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಬಗ್ಗೆ ನನ್ನ ತಂದೆ ಮತ್ತು ಮಾವನವರು ಹಿಂದೆ ಏನು ವ್ಯವಹಾರ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರದ 3 ಮತ್ತು 4 ನೇ ಪ್ಯಾರಾದಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಈ ಹಿಂದೆ ಯಾವುದೇ ವಿಭಾಗವಾಗಿರಲಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಪ್ರತಿವಾದ ಪತ್ರದಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ದಾವಾ ಆಸ್ತಿಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ 11 ಮತ್ತು 12 ನೇ ಪ್ಯಾರಾದಲ್ಲಿ ಹೇಳಿರುವ ವಿಷಯಗಳನ್ನು ನಾನು ಮತ್ತು ನನ್ನ ತಾಯಿ ಸೃಷ್ಟಿಸಿಕೊಂಡು ಬರೆದಿರುತ್ತೇವೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ ಮತ್ತು ನನ್ನ ತಾಯಿಯ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲ ದಿದ್ದರೂ ಸಹಃ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವ ದಾಖಲಾತಿಗಳು ಈ ದಾವಾ ಆಸ್ತಿಯ ಅನ್ಯತಃ ಲಾಭ ಪಡೆಯಲು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣಪತ್ರ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಹಿಸ್ಸೆ ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಮಾಡಿಕೊಂಡು ಸುಳ್ಳು ಪ್ರಮಾಣಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಹೊರಗೆ ಬರುತ್ತದೆ ಎಂಬ ಉದ್ದೇಶದಿಂದ ಅವರಿಗೆ ಎಸ್ ಪಿ ಎ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ 96 ವರ್ಷಗಳಾಗಿರುವುದಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಆರೋಗ್ಯ ಚೆನ್ನಾಗಿ ಇದ್ದರು ಸಹಃ ಆರೋಗ್ಯ ಸರಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.